# ಪರಿಶಿಷ್ಟರ ಜಮೀನಿಗೆ 2 ಲಕ್ಷ ಪರಿಹಾರಕ್ಕೆ ಸಮಿತಿ ಶಿಫಾರಸು

ವಿಧಾನಸಭೆ: ಅರಣ್ಯ ಇಲಾಖೆ ವಶಪಡಿಸಿಕೊಂಡಿರುವ ಪರಿಶಿಷ್ಟ ಜಾತಿಯವರ ಜಮೀನಿಗೆ ಈಗ ನೀಡುತ್ತಿರುವ 2 ಲಕ್ಷ ಪರಿಹಾರವನ್ನು ಮಾರುಕಟ್ಟೆ ಬೆಲೆಗನುಗುಣವಾಗಿ ಪರಿಹಾರ ನೀಡುವುದು, ಬಿಳಿಗಿರಿರಂಗನ ಬೆಟ್ಟದಲ್ಲಿ ಕುಡಿಯುವ ನೀರಿಗಾಗಿ ಕೊಳವೆ ಬಾವಿ ಕೊರೆಯಿಸುವುದು ಸೇರಿದಂತೆ ಅನೇಕ ಬೇಡಿಕೆಗಳಿಗೆ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿ ಶಿಫಾರಸ್ಸು ಮಾಡಿದೆ.

ಕಾಡಂಚಿನಲ್ಲಿ ವಾಸಿಸುವ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಅಲ್ಲಿಯೇ ವಾಸಮಾಡಬೇಕು. ಅವರಿಗೆ ಕಾಯಂ ಆಗಿ ನಿವೇಶನ, ಭೂಮಿ ನೀಡಬೇಕು. ಡಾ. ಕೆ. ಕಸ್ತೂರಿರಂಗನ್ ವರದಿಯನ್ನು ಸಂಪೂರ್ಣವಾಗಿ ಜಾರಿಯಾಗಬಾರದು, ಮಲೆನಾಡು ಭಾಗದಲ್ಲಿ ಕಂದಾಯ ಭೂಮಿ ಮತ್ತು ಅರಣ್ಯಭೂಮಿ ಎಷ್ಟು ಒತ್ತುವರಿಯಾಗಿದೆ ಎಂಬ ನಿಖರವಾಗಿ ತಿಳಿಯಲು ಎಲ್ಲ ಭೂಮಿಯನ್ನು ಪುನಃ ಸರ್ವೇ ಮಾಡಬೇಕು. ಆನೆಗಳು ನಾಡಿಗೆ ಬರಲು ತಪ್ಪಿಸುವ ಸಂಬಂಧ ಕಾಡಿನಲ್ಲಿಯೇ ಅವುಗಳಿಗೆ ಆಹಾರ ಮತ್ತು ನೀರು ಸಿಗುವಂತೆ ನೋಡಿಕೊಳ್ಳಬೇಕು. ಮತ್ತು ಆನೆಯಿಂದಾಗಿ ಮೃತಪಟ್ಟವರಿಗೆ ನೀಡುವ ಪರಿಹಾರವನ್ನು ಹೆಚ್ಚಿಸಬೇಕು.

ಕಾಡು ಪ್ರಾಣಿಗಳಿಂದ ತೊಂದರೆಗೊಳಗಾಗುವ ಕಾಡಿನ ಅಂಚಿನಲ್ಲಿ ಜನವಸತಿ ಇರುವ ಪ್ರದೇಶಗಳಲ್ಲಿ ಕಡ್ಡಾಯವಾಗಿ ವಿದ್ಯುದೀಕರಣ ಸೌಲಭ್ಯ ಒದಗಿಸುವುದು ನಿಗಮಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಿಕೊಳ್ಳುವುದು, ಆನೆ ಕಾವಾಡಿಗರ ಸಂಖ್ಯೆ ಹೆಚ್ಚಿಸಲು ಇಲಾಖೆ ವತಿಯಿಂದ ಅರ್ಜಿ ಆಹ್ವಾನಿಸಬೇಕು ಎಂದು ಸಮಿತಿ ಶಿಫಾರಸು ಮಾಡಿರುವ ವರದಿಯನ್ನು ಸದನದಲ್ಲಿ ಮಂಡಿಸಲಾಯಿತು.